ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

೧) ಬೈಲಹೊಂಗಲ ಮತ್ತು ಸೌಂದತ್ತಿ ತಾಲ್ಲೂಕುಗಳಲ್ಲಿ ಪರಿಹಾರ ಕಾರ್ಯಗಾರಿಗಳಿಗಾಗಿ ಜೂನ್ ೧೯೮೫ರಲ್ಲಿ ಈ ಕೆಳಕಂಡಂತೆ ಒಟ್ಟು ಹಣವನ್ನು ಖರ್ಚು ಮಾಡಲಾಗಿದೆ.

೧)	ಬೈಲಹೊಂಗಲ	...	೦.೫೯ ಲಕ್ಷ ರೂ. ಗಳು
೨)	ಸೌಂದತ್ತಿ	...	೩.೬೦ ಲಕ್ಷ ರೂ. ಗಳು
		ಒಟ್ಟು	೪.೧೯ ಲಕ್ಷ ರೂ. ಗಳು

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಸ್ವಾಮಿ, ಬೈಲಹೊಂಗಲ ತಾಲ್ಲೂಕು ಬರಗಾಲ ಪೀಡಿತ ಪ್ರದೇಶವಾಗಿದ್ದರೂ ಸಹ ಇಷ್ಟೊಂದು ಕಡಿಮೆ ಹಣವನ್ನು ಜೂನ್‌ತಿಂಗಳಲ್ಲಿ ಮಂಜೂರು ಮಾಡುವುದಕ್ಕೆ ಕಾರಣ ಏನು ? ಜನರು ಕೆಲಸ ಬೇಕೆಂದು ಮುಂದೆ ಬಂದರೂ, ಕೆಲಸ ಕೊಡದಿರುವುದಕ್ಕೆ ಕಾರಣ ಏನು ? ಬೈಲಹೊಂಗಲ್ ತಾಲ್ಲೂಕನ್ನು ಇಷ್ಟೊಂದು ಅಲಕ್ಷ್ಯ ಮಾಡುವುದಕ್ಕೆ ಕಾರಣ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಬೈಲಹೊಂಗಲ್ ತಾಲ್ಲೂಕನ್ನು ಅಲಕ್ಷ್ಯ ಮಾಡುವ ಪ್ರಶ್ನೆಯೇ ಇಲ್ಲ. ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಹಳ್ಳಿಗಳು ಬರಗಾಲ ಪೀಡಿತವಾಗಿವೆ ? ಎಷ್ಟು ಜನಸಂಖ್ಯೆ ಬರಗಾಲಕ್ಕೆ ಒಳಗಾಗಿದೆ. ಎಂಬುದನ್ನು ನೋಡಿ ಎಷ್ಟು ಹಣ ಬಿಡುಗಡೆ ಮಾಡಬೇಕು ಅದನ್ನು ಮಾಡಿದ್ದೇವೆ. ಆಗಸ್ಟ್ ತಿಂಗಳಲ್ಲಿ ೩ ಲಕ್ಷದ ೫೦ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಹೆಚ್ಚಿನ ವಿಶೇಷ ಸಂದರ್ಭಗಳು ಇದ್ದರೆ, ಆ ಬಗ್ಗೆ ಮಾನ್ಯ ಸದಸ್ಯರು ನಮನಕ್ಕೆ ತಂದರೆ, ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲಾ ಮಿನು ಮಾರುಕಟ್ಟೆ ಮಹಾ ಮಂಡಳಿಯಿಂದ ಬಾಕಿ ಇರುವ ಸಾಲ ವಸೂಲಾತಿ ಬಗ್ಗೆ

೧೦೧೫. ಶ್ರೀ ಜಿ. ಎಸ್. ಆಚಾರ್ (ಬೈರೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಸಹಕಾರಿ ಮಿನು ಮಾರುಕಟ್ಟೆ ಮಹಾ ಮಂಡಳಿಗಳಿಗೆ ಅಂತಾ ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕುಗಳು ನೀಡಿದ ಸಾಲಗಳಿಗೆ ಸರಕಾರ ಖಾತರಿ ನೀಡಿದ್ದು, ಸಾಲ ವಸೂಲಾಗದುದರಿಂದ ನೀಡಿದ ಖಾತರಿಯನ್ನು ಹಿಂತೆಗೆದುಕೊಳ್ಳಲು ಆಯಾ ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕುಗಳು ಬಹು ಹಿಂದೆಯೇ ಅಗತ್ಯವುಳ್ಳ ಕ್ರಮ ಕೈಗೊಂಡಿದ್ದರೂ, ಹಣ ಪಾವತಿಯಾಗಿಲ್ಲವೇಕೆ ?

ಆ) ವಿಳಂಬಕ್ಕೆ ಕಾರಣವೇನು, ಹಾಗೂ ಯಾವಾಗ ಪಾವತಿಯಾಗಬಹುದು ?

ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಮತ್ತು ಆ) ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ದಕ್ಷಿಣಕನ್ನಡ ಮತ್ತು ಉತ್ತರಕನ್ನಡ ಜಿಲ್ಲೆಗಳ ಸಹಕಾರಿ ಮಿನು ಮಾರುಕಟ್ಟೆ ಮಹಾ ಮಂಡಳಿಗಳಿಂದ ಬರಬೇಕಾಗಿರುವ ಬಾಕಿ ಹಣ ವಸೂಲಾತಿ ಕಾರ್ಯಕ್ರಮದಲ್ಲಿ ಸಾಕಷ್ಟು ಪ್ರಯತ್ನ ಮಾಡಿದೆ, ಸರ್ಕಾರದ ಖಾತರಿಯನ್ನು ಕೋರಿ ವುದು ಅಕಾಲಿಕವಾಗುತ್ತದೆ ಈ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ಬರ ಬೇಕಾಗಿರುವ ಸಾಲವನ್ನು ಹಿಂದೆ ಪಡೆಯಲಿಲ್ಲಿ ಸಹಕಾರಿ ಮಿನು ಮಾರುಕಟ್ಟೆ ಮಹಾ ಮಂಡಳಿಗಳ ಸಾಮರ್ಥ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ವಸ್ತು ನಿಷ್ಠವಾದ ಕಾರ್ಯಕ್ರಮವನ್ನು ರೂಪಿಸಿ ಕೊಳ್ಳಬೇಕು ಹಾಗೂ ಅಂತಿಮ ಘಟ್ಟವಾಗಿ ಮಾತ್ರ ಸರ್ಕಾರದ ಖಾತರಿಯನ್ನು ಆಹ್ವಾನಿಸಬೇಕೆಂದು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ಸಲಹೆ, ನೀಡಲಾಗಿದೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ವಸ್ತುವಿಷ್ಠವಾದ ಕಾರ್ಯಕ್ರಮವನ್ನು ಈ ಮಹಾ ಮಂಡಲಗಳಿಗೆ ರೂಪಿಸಿಕೊಡಬೇಕೆಂದು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಮತ್ತು ಇಂತಹ ಖಾತ್ರಿಯನ್ನು ಕೊಟ್ಟಮೇಲೆ, ವಸೂಲಾತಿ ಮಾಡುವುದರಲ್ಲಿಯೂ ಸರಕಾರದ ಜವಾಬ್ದಾರಿ ಕೂಡಾ ಇದೆ ಈ. ಫೆಡರೇಷನ್‌ಗಳಿಂದ ಹಣ ಬರಲಿಕ್ಕೆ ಇದ್ದರೂ ಸಹ, ಬಾಕಿ ಇದ್ದರೂ ಸಹ, ಸರಕಾರ ಬೇರೆ ಬೇರೆ ಇಲಾಖೆಯಿಂದ, ಈ ಫೆಡರೇಷನ್‌ಗಳಿಗೆ, ವಾರ್ಷಿಕ ಅನುದಾನ ಕೊಡುತ್ತಿದ್ದು, ಅವುಗಳನ್ನು ಡಿ.ಸಿ.ಸಿ. ಬ್ಯಾಂಕುಗಳ ಬದಲಿಗೆ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಚಲಾವಣೆ ಮಾಡುತ್ತಿರುವುದು ಮತ್ತು ಈ ಹಣವನ್ನು ವಾಪಸ್ ಕೊಡುವುದರಲ್ಲಿ ಯಾವುದೇ ಆಸಕ್ತಿ ತೋರದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಹಾಗೇನಾದರೂ ಇದ್ದಲ್ಲಿ ಆಡಳಿತ ಮಂಡಲಿಗಳನ್ನು ಸರಿಪಡಿಸಲಿಕ್ಕೆ, ಸರಿದಾರಿಗೆ ತರಲಿಕ್ಕೆ ಸರಕಾರ ಏನಾದರೂ ಕಾರ್ಯಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಮಿಾನಂಗಾರಿಕೆ ಮಹಾ ಮಂಡಲಗಳು ಸಂಸ್ಥಿದಾರರಾಗಿದ್ದರೂ ಸಹ ಬೇರೆಕಡೆಯಿಂದ ಅನುದಾನ ಕೊಡುತ್ತಿದ್ದೀರಿ ಎಂದುಹೇಳಿದ್ದಾರೆ.ಒಂದೇ ಸಾರಿ ಅದನು ಮುಚ್ಚುವುದಕ್ಕೆ ಆಗುವುದಿಲ್ಲ. ಬಹಳಷ್ಟು ಜನ ಅದನ್ನು ನಂಬಿಕೊಂಡಿದ್ದಾರೆ. ಅಲ್ಲಿ ಮಿಾನುನಾರಿಕೆಯಿಂದ ಜೀವನ ಮಾಡುವವರು ಬಹಳಷ್ಟು ಜನ ಇದ್ದಾರೆ. ಜಿಲ್ಲಾ ಬ್ಯಾಂಕುಗಳು, ಈ ಮಂಡಲಗಳು, ಸಂಸ್ಥಿದಾರರಾದ ಮಂದು ವರ್ಷವೇ ಕಾರ್ಯಕ್ರಮ ಕೈಗೊಂಡಿದ್ದರೆ ಇಷ್ಟೊಂದು ಹಣ ಅವರು ಕಳೆದುಕೊಳ್ಳುತ್ತಿರಲಿಲ್ಲ. ಇಷ್ಟೊಂದು ಅಧಃಪತನಕ್ಕೆ ಈ ಫೆಡರೇಷನ್‌ಗಳೂ ಬರುತ್ತಿರಲಿಲ್ಲ. ಸರಕಾರ ಗ್ಯಾರಂಟಿ ನಿಂತಿದೆ ನಿಜ. ಕೋಟ್ಯಾಂತರ ರೂಪಾಯಿಗಳಿಗೆ ಗ್ಯಾರಂಟಿ ನಿಂತಿದ್ದೇವೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಅಪೆಕ್ಸ್ ಬ್ಯಾಂಕ್‌ಗೆ ಬಾರೋಯರ್ಸ್‌ಗೆ ಗ್ಯಾರಂಟಿ ನಿಂತಿದ್ದೇವೆ. ಈ ಕನ್ಸ್ಯೂಮರ್ ಫೆಡರೇಷನ್‌ಗಳು ಏನೂ ಕೆಲಸ ಮಾಡದೇ ಇದ್ದರೂ, ನಾವು ಗ್ಯಾರಂಟಿ ನಿಂತಿದ್ದೇವೆ. ಸಾಲ ಕೊಡಿರಿ ಎಂದು ಹೇಳಿದರೆ, ಸರಕಾರದಲ್ಲಿ ಮೂರು ಕಾಸೂ ಉಳಿಯುವುದಿಲ್ಲ. ಅವರ ಕರ್ತವ್ಯ ಮೊದಲಂ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು.—ಮೂರು ಕಾಸು ಇದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ನಿಮ್ಮಂಥವರು ಸೇರಿ ಸರಿ ಮಾಡಬೇಕು. ಮಾತನಾಡುವುದು ಸುಲಭ.

ಈಗ ಇತ್ತೀಚೆಗೆ ಅವರನ್ನು ಕರೆಸಿ ಮಾತನಾಡಿದ್ದೇವೆ. ಎಲ್ಲಾ ಬ್ಯಾಂಕುಗಳ ಅಧ್ಯಕ್ಷರನ್ನು, ಫೆಡರೇಷನ್‌ನವರನ್ನೂ ಇಬ್ಬರನ್ನೂ ಕರೆಸಿ ಮಾತನಾಡಿ, ಏನು ಇದುವರೆಗೆ ಹೆಚ್ಚಿನ ಬಡ್ಡಿ ತೆಗೆದು ಕೊಂಡಿದ್ದಾರೆ, ಆ ಬಡ್ಡಿಯನ್ನು ವಾಪಸ್ ಕೊಡುವಹಾಗೆ, ಅಪೆಕ್ಸ್ ಬ್ಯಾಂಕ್‌ನವರು ಮಾರ್ಜಿನ್ ಏನು ತೆಗೆದುಕೊಂಡಿದ್ದಾರೆ, ಅದನ್ನು ವಾಪಸ್ ಕೊಡುವಹಾಗೆ ಮಾತನಾಡಿದ್ದೇನೆ. ಅವರಂಗಳೇನು ೯–೧೦ ತಿಂಗಳ ಮಿಾನುಗಾರಿಕೆ ಮಾಡುತ್ತಾರೆ, ಆ ಸಮಯದಲ್ಲಿ ಜಾಸ್ತಿ ಹಣ ಸಂಪಾದನೆ ಮಾಡಿ, ವಾಪಸ್ ಮಾಡುವ ಹಾಗೆ ಹೇಳಿ ಕಳೇಹಿಸಿದ್ದೇನೆ. ಇನ್ನೊಂದು ವರ್ಷ ನೋಡುತ್ತೇವೆ, ಆಮೇಲೆ ಲಿಕ್ವಿಡೇಷನ್ ಮಾಡುತ್ತೇವೆ. ಒಂದೆರಡು ವರ್ಷಗಳಲ್ಲಿ ಅವರು ಪೊಜಿಷನ್ ಇಂಪ್ರೂವ್ ಮಾಡಿಕೊಳ್ಳದಿದ್ದರೆ, ಬೇರೆ ವಿಧ ಇಲ್ಲ. ಲಿಕ್ವಿಡೇಷನ್ ಮಾಡಿಕೊಳ್ಳುತ್ತೇವೆಂದು ಹೇಳಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಿಾನುಗಾರಿಕೆ ಫೆಡರೇಷನ್‌ಗೆ ಆಸ್ತಿ ಇದೆ. ಅವರಿಂದ ಎಷ್ಟು ಸಾಲ ಬರಬೇಕು ಅದಕ್ಕಿಂತ ಹೆಚ್ಚಿನ ಆಸ್ತಿ ಇದೆ. ಏನು ಬಾಕಿ ಇದೆ, ಅದನ್ನು ವಸೂಲಾತಿ ಮಾಡುವುದಕ್ಕೆ ಸರಕಾರ ಗ್ಯಾರಂಟಿ ನಿಂತಿದೆ. ಮಾನ್ಯ ಆಚಾರ್‌ರವರು ಜಿಲ್ಲಾ ಬ್ಯಾಂಕ್‌ಗೆ ಮೂರು ನಾಲ್ಕು ವರ್ಷ ಅಧ್ಯಕ್ಷರಾಗಿದ್ದರು. ಅವರು ಕಾರ್ಯಕ್ರಮ ತೆಗೆದುಕೊಳ್ಳಬಹುದಾಗಿತ್ತು. ತೆಗೆದುಕೊಂಡಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ರಿಪೆಡ್ಯೂಲ್ ಮಾಡಿಕೊಟ್ಟು, ಪುನಃ ಅನುಕೂಲ ಮಾಡಿ ಕೊಟ್ಟಿದ್ದಕ್ಕೆ ಕಾರಣ, ಮಿಾನುಗಾರಿಕೆಗೆ ಉತ್ತೇಜನ ಕೊಡ ಬೇಕೆಂಬುದು. ಎರಡೂ ಜಿಲ್ಲೆಗಳಲ್ಲಿ ಮಿಾನುಗಾರಿಕೆಯಿಂದ ಜೀವನ ಮಾಡುತ್ತಿರುವವರಿಗೆ ತೊಂದರೆ ಯಾಗಬಾರದು ಎಂದು ಸರಕಾರ ವ್ಯವಸ್ಥೆ ಮಾಡಿಕೊಟ್ಟಿದೆ. ಒಂದೆರಡು ವರ್ಷ ಕಾಯ್ದು ಆಗದಿದ್ದರೆ, ಲಿಕ್ವಿಡೇಷನ್ ಮಾಡುತ್ತೇವೆ.

ಶ್ರೀ ಜಿ ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಒಂದು ಉಲ್ಲೇಖ ಬಂತು. ಡಿ.ಸಿ.ಸಿ. ಬ್ಯಾಂಕ್ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ನಾವು ಆರ್ಬಿಟ್ರೇಷನ್ ಫೈಲ್ ಮಾಡಿದರೆ, ಕಾರಣಾಂತರ

ದಿಂದ, ಆದಕ್ಕೆ ಸ್ವೇ ಸಿಕ್ಕಿಬಿಡುತ್ತದೆ. ಇದು ಮಾನ್ಯ ಸಚಿವರಿಗೂ ಗೊತ್ತಿದೆ. ಇದೆಲ್ಲಾ ಹಂತಹಂತ ಗಳಲ್ಲಿ ಸ್ವೇ ಆದುದರಿಂದ; ಅನಿವಾರ್ಯವಾಗಿ ಇಂತಹದನ್ನು ನಾವಾಗಿಯೇ ಮಾಡುವಂತಹ ಪರಿಸ್ಥಿತಿ ಬಂತು. ಸರಕಾರದವರು ಆಲೋಚನೆ ಮಾಡಿ ತೊಂದರೆ ಬಾರದಹಾಗೆ ನೋಡಿಕೊಳ್ಳಬೇಕು, ಕಾಯಿದೆ ಯಲ್ಲಿ ತೊಂದರೆಯಾಗಬಾರದು. ಆ ರೀತಿಯ ಕಾನೂನುಗಳನ್ನು ಮಾಡಲಿ ಎಂದು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಆರ್ಬಿಟ್ರೇಷನ್ ಫೈಲ್ ಮಾಡಿದ್ದಾರೆ ಎಂದು ಕೇಳಿದ್ದೇನೆ. ಸೇಲ್ ಆಫೀಸರ್ ಕೊಟ್ಟು, ಸೇಲ್ಸ್ ಆಫೀಸರ್ ಕೊಟ್ಟರೂ ಸಹ ಕೆಲಸ ಮಾಡಲಿಲ್ಲ ಎಂದು ಹೇಳುತ್ತೇನೆ. ಈಗ ನಿಮ್ಮ ಆಫೀಸರ್ಸ್‌ಗೆ ವಹಿಸಿಕೊಡುತ್ತೇವೆ, ಹರಾಜು ಹಾಕುವುದು ಮಾಡಿಕೊಳ್ಳಿ ಎಂದು ಅವರಿಗೆ ಸೂಚನೆ ಕೊಟ್ಟಿದ್ದೇನೆ.

ಹಳ್ಳಿಗಳ ವಿದ್ಯುದ್ದೀಕರಣ

೧೦೮೬. ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ).—ಮಾನ್ಯ ವಿದ್ಯುಚ್ಛಕ್ತಿ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಈಗಾಗಲೇ ವಿದ್ಯುದ್ದೀಕರಣವಾದ ಗ್ರಾಮಗಳ ಸಂಖ್ಯೆ ?

ಆ) ಇನ್ನೂ ವಿದ್ಯುದ್ದೀಕರಣವಾಗಬೇಕಾಗಿರುವ ಗ್ರಾಮಗಳ ಸಂಖ್ಯೆ ?

ಇ) ಆಗಲೇ ವಿದ್ಯುದ್ದೀಕರಣವಾಗಬೇಕಾಗಿರುವ ಒಟ್ಟು ಪಾಳ್ಯಗಳ ಸಂಖ್ಯೆ, ಮತ್ತು ಇನ್ನೂ ವಿದ್ಯುದ್ದೀಕರಣವಾಗಬೇಕಾಗಿರುವ ಒಟ್ಟು ಪಾಳ್ಯಗಳ ಸಂಖ್ಯೆ ?

ಶ್ರಿ ಜೆ. ಎಸ್. ದೇಶ್‌ಮುಖ್ (ವಿದ್ಯುತ್ ಗಣಿ ಮತ್ತು ಭೂಗರ್ಭ ಮಂತ್ರಿಗಳು).—

ಅ) ೨೬೦ ಗ್ರಾಮಗಳು.

ಆ) ೧೦ ಗ್ರಾಮಗಳು

ಇ) ೮೮ ಪಾಳ್ಯಗಳನ್ನು ವಿದ್ಯುದ್ದೀಕರಣ ಮಾಡಲಾಗಿದೆ ಉಳಿದ ೧೮೫ ಪಾಳ್ಯಗಳನ್ನು ವಿದ್ಯುದ್ದೀಕರಣ ಮಾಡಬೇಕಾಗಿದೆ,

ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಅಧ್ಯಕ್ಷರೇ, ಇದು ಯಾವಾಗ ಕಂಪ್ಲೀಟ್ ಆಗುತ್ತದೆ ? ಈ ಹಳ್ಳಿಗಳಿಗೆ ಯಾವಾಗ ವಿದ್ಯುಚ್ಛಕ್ತಿ ಕೊಡಲಾಗುವುದು ಎಂದು ಕೇಳುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ, ನೆಲಮಂಗಲ ವಿಭಾಗದಲ್ಲಿ ನೆಲಮಂಗಲ ಮಾಗಡಿ, ದೊಡ್ಡಬಳ್ಳಾಪುರ ತಾಲ್ಲೂಕುಗಳ ಹೋಬಳಿಗಳು ಸೇರಿವೆ. ಈಗ ವಿದ್ಯುದ್ದೀಕರಣವಾಗಿರುವ ಗ್ರಾಮಗಳ ಸಂಖ್ಯೆ, ನೆಲಮಂಗಲ ತಾಲ್ಲೂಕಿನಲ್ಲಿ ೧೬೩, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ೪೦ ಮಾಗಡಿ ತಾಲ್ಲೂಕಿನಲ್ಲಿ ೫೪ ಒಟ್ಟು ೨೬೬ ಗ್ರಾಮಗಳು. ಹಾಗೂ ಇನ್ನೂ ವಿದ್ಯುದ್ದೀಕರಣ ಆಗಬೇಕಾಗಿರುವ ಗ್ರಾಮಗಳು, ನೆಲಮಂಗಲ ತಾಲ್ಲೂಕಿನಲ್ಲಿ ೫, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ೧ ಮಾಗಡಿ ತಾಲ್ಲೂಕಿನಲ್ಲಿ ೪. ಒಟ್ಟು ೧೦ ಗ್ರಾಮಗಳು, ವಿದ್ಯುದ್ದೀಕರಣ ಆಗಿರುವ ಪಾಳ್ಯಗಳು (ಹ್ಯಾಮ್ಲೆಟ್ಸ್) ನೆಲಮಂಗಲ ತಾಲ್ಲೂಕಿನಲ್ಲಿ ೪೫, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ೧೩, ಮಾಗಡಿ ತಾಲ್ಲೂಕಿನಲ್ಲಿ ೩೦, ಒಟ್ಟು ೮೮. ಇನ್ನೂ ವಿದ್ಯುದ್ದೀಕರಣ ಮಾಡಬೇಕಾಗಿರುವ ಪಾಳ್ಯಗಳು, ನೆಲಮಂಗಲ ತಾಲ್ಲೂಕಿನಲ್ಲಿ೦.ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ೨. ಮಾಗಡಿತಾಲ್ಲೂಕಿನಲ್ಲಿ ೬೩ ಒಟ್ಟು ೧೧೦,ಹತ್ತು ಗ್ರಾಮಗಳಿಗೆ ೧. ೮೫-೮೬ನೇ ಸಾಲಿನಲ್ಲಿ ವಿದ್ಯುದೀಕರಣ ಮಾಡಲಾಗುವುದು. ಉಳಿದಿರತಕ್ಕ ವಿವಿಧ ಗ್ರಾಮಗಳನ್ನು ಪಾಳ್ಯಗಳನ್ನು ೧೯೮೬-೮೭ ಸಾಲಿನಲ್ಲಿ ಮಾಡಲಾಗುವುದು.

ಹರಪನಹಳ್ಳಿ ತಾಲ್ಲೂಕಿನಲ್ಲಿ ೧೯೮೪-೮೫ನೇ ಸಾಲಿನಲ್ಲಿ ಮಂಜೂರಾದ ವಿದ್ಯುಚ್ಛಕ್ತಿಯ ಬಗ್ಗೆ

೧೦೩೭. ಶ್ರೀ ಬಿ. ಎಸ್. ಯೆಂಕಾನಾಯ್ಕ್ (ಹರಪನಹಳ್ಳಿ).—ಮಾನ್ಯ ವಿದ್ಯುಚ್ಛಕ್ತಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ೧೯೮೪-೮೫ನೇ ಸಾಲಿನಲ್ಲಿ ಮಂಜೂರಾತಿ ಹೊಂದಿದ್ದು ವಿದ್ಯುಚ್ಛಕ್ತಿ ಒದಗಿಸಬೇಕಾಗಿದ್ದ ಹಳ್ಳಿಗಳೆಷ್ಟು ?